ಫ್ಯಾಕ್ಸ್ : 080 – 2202 8041 ದೂರವಾಣಿ : 080 – 2202 8032

ಕರ್ನಾಟಕ ಸರ್ಕಾರ

*ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ*

ವಾರ್ತಾ ಸೌಧ, ಸಂಖ್ಯೆ : 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001

---

ಸಂಖ್ಯೆ: ವಾಇ : ಸುಮಪ : ಪ ಪ್ರ : 2014–15 : ಮಾರ್ಚ್ 7, 2015

**ಪತ್ರಿಕಾ ಪ್ರಕಟಣೆ**

## ಕೇರಳ ವಿಧಾನಸಭೆಯ ಸಭಾಧ್ಯಕ್ಷ ಜಿ. ಕಾರ್ತಿಕೇಯನ್ ಅವರ ನಿಧನಕ್ಕೆ ಮುಖ್ಯಮಂತ್ರಿ ಶೋಕ

**ಬೆಂಗಳೂರು, ಮಾರ್ಚ್ 7, :**

ಕೇರಳ ವಿಧಾನಸಭೆಯ ಸಭಾಧ್ಯಕ್ಷರಾಗಿದ್ದ ಶ್ರೀ ಜಿ. ಕಾರ್ತಿಕೇಯನ್ ಅವರ ನಿಧನಕ್ಕೆ ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯ ಅವರು ತೀವ್ರ ಶೋಕ ವ್ಯಕ್ತಪಡಿಸಿದ್ದಾರೆ.

ಕೆಲದಿನಗಳ ಹಿಂದೆಷ್ಟೇ ನಗರದ ಖಾಸಗಿ ಆಸ್ಪತ್ರೆಯಲ್ಲಿ ಶ್ರೀ ಕಾರ್ತಿಕೇಯನ್ ಅವರನ್ನು ನಾನು ಖುದ್ದು ಭೇಟಿಯಾಗಿದ್ದಾಗ ಗುಣಮುಖರಾಗಿ ಹೊರಬರುವ ವಿಶ್ವಾಸವನ್ನು ಅವರು ವ್ಯಕ್ತಪಡಿಸಿದ್ದರು. ಶ್ರೀ ಕಾರ್ತಿಕೇಯನ್ ಅವರ ಹಠಾತ್ ನಿಧನವು ನನ್ನಲ್ಲಿ ನೋವುಂಟು ಮಾಡಿದೆ. ಮೃದು ಮಾತಿನ ಶ್ರೀ ಕಾರ್ತಿಕೇಯನ್ ಅವರು ತಮ್ಮ ಸರಳತೆಯಿಂದ ಎಲ್ಲರ ಪ್ರೀತಿಗೆ ಪಾತ್ರರಾಗಿದ್ದರು ಎಂದು ಶ್ರೀ ಸಿದ್ದರಾಮಯ್ಯ ಅವರು ತಮ್ಮ ಸಂದೇಶದಲ್ಲಿ ಬಣ್ಣಿಸಿದ್ದಾರೆ.

*************

ಡಿ ಪಿ ಎಂ